# ಕಥೋಪದೇಶ

# ಪ್ರೇರಕ ಶಕ್ತಿ

**ಒಂದು ಮಾವಿನ ಮರ.** ಆ ಮರದ ತುಂಬ ಹಣ್ಣುಗಳಿದ್ದವು. ಮರದ ಕೆಳಗೆ ಅನೇಕ ಕಲ್ಲುಗಳಿದ್ದವು. ಒಂದು ಕಲ್ಲಿಗೆ ಮಾತ್ರ ಪ್ರಜ್ಞೆ ಇತ್ತು. ಆದರೂ ನೆಲದ ಮೇಲೆ ಎಲ್ಲ ಕಲ್ಲುಗಳಂತೆ ತೆಪ್ಪಗೆ ಬಿದ್ದಿತ್ತು.

ಒಬ್ಬ ಬಾಲಕನು ಮರದ ಹತ್ತಿರ ಬಂದನು. ಮರದ ತುಂಬ ಇರುವ ಕಳಿತ ಮಾವಿನ ಹಣ್ಣುಗಳನ್ನು ನೋಡಿದ. ಅವನಿಗೆ ಹಣ್ಣು ತಿನ್ನುವ ಆಸೆಯಾಯಿತು. ಅವನು ಒಂದು ಕಲ್ಲನ್ನು ಕೈಗೆತ್ತಿಕೊಂಡು ಹಣ್ಣಿನ ಕಡೆ ಜೋರಾಗಿ ಎಸೆದನು. ಅವನು ಎಸೆದ ಕಲ್ಲು ಪ್ರಜ್ಞೆ ಉಳ್ಳದ್ದಾಗಿತ್ತು.

ಆ ಕಲ್ಲು ಮೇಲಕ್ಕೆ ಹಾರಿ ಹಣ್ಣನ್ನು ಕೆಳಗೆ ಉರುಳಿಸಿ, ಮತ್ತೆ ನೆಲಕ್ಕೆ ಬಿತ್ತು.

ಈಗ ಆ ಕಲ್ಲಿಗೆ ಅನಿಸಿತು. ತಾನೇ ಮೇಲಕ್ಕೆ ಹಾರಿ ಹಣ್ಣನ್ನು ಕಿತ್ತದ್ದು ಎಂದು.

ಇದೇ ರೀತಿ ನಾವೂ ಕೂಡ ನಮ್ಮ ಅಹಂಕಾರದ ದೆಸೆಯಿಂದ ನಾವೇ ಎಲ್ಲ ಮಾಡುತ್ತಿರುವುದು ಎಂದು ಭಾವಿಸುತ್ತೇವೆ. ನಮ್ಮ ಹಿಂದೆ ದೇವರಿದ್ದಾನೆ, ಅವನೇ ಪ್ರೇರಕ ಶಕ್ತಿ ಎಂಬುದನ್ನು ಮರೆಯುತ್ತೇವೆ. ☆

